# ● ಸುದ್ದಿ ಸಂಚಯ ●

**✱ ಜಾಗತಿಕ** ಶಾಂತಿ, ಸುಸನೆ ಹಾಗೂ ಸಮನ್ವಯಗಳಿಗಾಗಿ ಶ್ರಮಿಸುವ ಸಂಸ್ಥೆ/ವ್ಯಕ್ತಿಗಳಿಗೆ ನೀಡುವ ಎಂ. ಜಲಾಲುದ್ದೀನ್ ರೂಮಿ ಅಂತಾರಾಷ್ಟ್ರೀಯ ಪುರಸ್ಕಾರಕ್ಕೆ ರಾಮಕೃಷ್ಣ ಮಠ ಮತ್ತು ಮಿಷನ್, ೨೦೦೬ನೇ ವರ್ಷದಲ್ಲಿ ಆಯ್ಕೆಯಾಗಿದೆ. ಭಾರತದ ಇಂಟರ್‌ಫೇತ್ ಹಾರ್ಮನಿ ಫೌಂಡೇಷನ್ ಹಾಗೂ ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್‌ಗಳ ಸಂಯುಕ್ತ ಆಶ್ರಯದಲ್ಲಿ ನವದೆಹಲಿಯ ಇಂಡಿಯಾ ಇಸ್ಲಾಮಿಕ್ ಕಲ್ಚರಲ್ ಸೆಂಟರ್‌ನಲ್ಲಿ ನಡೆದ ಎರಡು ದಿನಗಳ ಕಾರ್ಯಕ್ರಮದಲ್ಲಿ ಇದನ್ನು ನೀಡಲಾಯಿತು. ಏಪ್ರಿಲ್ ೨೧ರಂದು ಪ್ರಧಾನ ಮಂತ್ರಿಗಳಾದ ಡಾ. ಮನಮೋಹನ್ ಸಿಂಗ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜರು ಏಪ್ರಿಲ್ ೨೨ರಂದು ರಾಮಕೃಷ್ಣ ಮಹಾಸಂಘದ ಪರವಾಗಿ ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್‌ನ ಅಧ್ಯಕ್ಷರಾದ ಡಾ. ಕರಣ್‌ಸಿಂಗ್ ಅವರಿಂದ ಪುರಸ್ಕಾರವನ್ನು ಸ್ವೀಕರಿಸಿದರು.

**✱ ಬೇಲೂರು** ಮಠದ ಬಳಿಯಿರುವ ರಾಮಕೃಷ್ಣ ಮಿಷನ್ ಶಾರದಾಪೀಠದ ಅಂಗಸಂಸ್ಥೆಯಾದ ವಿದ್ಯಾಮಂದಿರದ ಬಿ.ಎಸ್‌ಸಿ. ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀ ಅರಿಂದಮ್ ಬಿಸ್ವಾಸ್ ಹಾಗೂ ಶ್ರೀ ಕಿಸಲಯ ಸಾಹಾ ಅವರಿಗೆ ಜಗದೀಶ್ ಬೋಸ್ ರಾಷ್ಟ್ರೀಯ ವಿಜ್ಞಾನ ಪ್ರತಿಭೆ ಪುರಸ್ಕಾರ ಲಭಿಸಿದೆ. ತಿಂಗಳಿಗೆ ೫೦೦ ರೂ.ಗಳಂತೆ ಐದು ವರ್ಷಗಳ ಕಾಲ ವಿದ್ಯಾರ್ಥಿ ವೇತನ ಹಾಗೂ ರೂ. ೧೦೦೦೦ ವಾರ್ಷಿಕ ಪುಸ್ತಕ ಸಹಾಯಧನವನ್ನು ಇವರು ಪಡೆದಿರುತ್ತಾರೆ.

**✱ ಮೈಸೂರಿನ** ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯು ಕರ್ನಾಟಕದ ಗ್ರಾಮೀಣ ಯುವಕರಿಗಾಗಿ ಏಳು ದಿನಗಳ ಸಂಸ್ಕಾರ ಸಂವರ್ಧನಾ ಮತ್ತು ವ್ಯಕ್ತಿತ್ವ ವಿಕಸನ ಶಿಬಿರವನ್ನು ಮೇ ೨೬ರಿಂದ ಜೂನ್ ೧ರವರೆಗೆ ನಡೆಸಿತು. ಕರ್ನಾಟಕದ ೨೦ ಜಿಲ್ಲೆಗಳಿಂದ ಭಾಗವಹಿಸಿದ್ದ ೧೪೬ ಯುವಕರಿಗೆ ಈ ಶಿಬಿರದಲ್ಲಿ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಸಂಸ್ಥೆಯ ವತಿಯಿಂದ ಏರ್ಪಡಿಸಲಾಗಿತ್ತು. ಸಂಸ್ಥೆಯ ಶಾಂತಿಯುತ ವಾತಾವರಣದಲ್ಲಿ ಪ್ರಾತಃಕಾಲ ಐದು ಘಂಟೆಯಿಂದ ರಾತ್ರಿ ಹತ್ತರವರೆಗೆ ನಡೆಯುತ್ತಿದ್ದ ಶಿಬಿರದ ಕಾರ್ಯಕ್ರಮಗಳಲ್ಲಿ ಪ್ರಾರ್ಥನೆ, ಯೋಗಾಸನ, ಆಶ್ರಮದ ಸ್ವಾಮಿಗಳಿಂದ ಹಾಗೂ ವಿಭಿನ್ನ ಕ್ಷೇತ್ರಗಳಲ್ಲಿ ನುರಿತವರಿಂದ ವಿವಿಧ ವಿಷಯಗಳ ಮೇಲೆ ಬೋಧಪ್ರದವಾದ ಪ್ರವಚನಗಳು, ವಿಷ್ಣುಸಹಸ್ರನಾಮ ಪಠಣ, ವಿಚಾರ ವಿನಿಮಯ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತಿದ್ದವು.




## OUR SERVICES NOW AT MYSORE

**Out sourcing Accounts, Inventory Dept.**

Part time or full time with complete statutory compliance

**Internal Audit / System Implementation**

Income Tax, TDS, Professional Tax, FBT, TM, Central Excise, Service Tax, PF
ESI, VAT, VAT Refund, ROC, EOU, STPI, SSI, Private Limited Company,
Partnership, Trust, Factories Inspector, Pollution Control, Shops & Establishment

**Payroll: with/ without PF, ESI, PT, TDS**

**Project Finance**

Compiling Project reports/ Liasoning Project Finance

**International Logistics: Sea / Air**

Internal Freight Forwarding & Clearing, Complete Documentation

total solutions™
SMART • ACCURATE • COMPREHENSIVE

**total strategic solutions (India) pvt. ltd.**
**No.598 West, 1st Floor, 1st Cross, Vishwa Manava Double Road, C&D Block, Kuvempu Nagar, Mysore -23; Tel: 4260505, Mobile: 9972039801**
**H.O. Bangalore-08 Tel: 25203730, 41480813 /16**
**Mobile # 9845068263 Fax: 41480452**
**B.O. Pune: 02066204862 Mobile: 09225512083/4**
**Email: total@vsnl.in.**, Visit us at: www.total-sols.com